137(4)

SATYAVADI Founded 1917 Regd. No. M. 1299

ಸತ್ಯವಾದಿ

(ಆರಮನೆ ಪಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 105] ಸೋಮವಾರ 17—12—45 [ಬಿಡಿ ಪ್ರತಿ 6 ಪೈ

ಗಾಜಿನ ಮರಳು ಕಾಡು

ಪ್ರಳಯ ಭಯಂಕರವಾದ ಪರಿಮಾಣು ಶಕ್ತಿಸ್ಫೋಟವನ್ನೂ ಪ್ರಯೋಗಿಸಲ್ಪಟ್ಟ ಮೆಕ್ಸಿಕೋ ಮರಳು ಕಾಡಿನಲ್ಲಿ ಅದರ ತೀಕ್ಷ್ಣತೆಗೆ ಮರಳು ದ್ರವರೂಪವಾಗಿ ಕಾಲು ಅಂಗುಲ ದಪ್ಪಕ್ಕೆ ಗಾಜಿನಂತೆ ಬದಲಾವಣೆಯನ್ನು ಹೊಂದಿರುವುದಾಗಿ ತಿಳಿಯಬಂದಿದೆ. ಒಂದು ಕಡೆ ಅರ್ಧ ಮೈಲು ಅಗಲದ ಗುಂಡವು ಬದ್ದಿರುವುದಂತೆ. ಅದು ಆಳ 25 ಅಡಿಯಷ್ಟು ಇರುವುದಂತೆ

ರಷ್ಯಾಕ್ಕೆ ಬಂದಿರುವ ವ್ಯಾಧಿ

ರಷ್ಯಾ ದೇಶವು 'ಕಮ್ಯುನಿಸ್ಟ್ ಇಂಪೀರಿಯಲಿಜಂ' ಎಂಬ ವ್ಯಾಧಿಯಿಂದ ನರಳುತ್ತಿರುವುದೆಂದು ಚೀಣಾದಲ್ಲಿ ಅಮೆರಿಕ ರಾಯಭಾರಿಯಾಗಿದ್ದಾತನು ತಿಳಿಸಿರುವನು. ಈ ವ್ಯಾಧಿಯ ಲಕ್ಷಣಗಳು ಯಾವುವೆಂದರೆ —

1) ತಾನು ಹೇಳಿದಂತೆ ಇತರ ದೇಶಗಳು ಕೇಳತಕ್ಕದ್ದು.

2) ತನ್ನ ರಾಜ್ಯಾಂಗದಂತಹ ರಾಜ್ಯಾಂಗವನ್ನು ಮಿಕ್ಕ ದೇಶಗಳು ಅವಲಂಬಿಸತಕ್ಕದ್ದು.

3) ಅಂಥ ಏಕ ರಾಜ್ಯಾಂಗವುಳ್ಳ ದೇಶಗಳೆಲ್ಲವೂ ತನ್ನೊಂದಿಗೆ ಸೇರಿ ತನ್ನ ಆಧೀನದಲ್ಲಿರತಕ್ಕದ್ದು.

4) ಅಂಥಾ ರಾಜ್ಯದ ಡಿಕ್ಟೇಟರ್ರು ಸ್ಟಾಲಿನೋ, ಮಾಲ್ಟೋವೋ ಆಗಿರತಕ್ಕದ್ದು.

ಡಾಕ್ಕಾ, ಡಿ 4 — ಗುಡಿಸುವವರು ಜೂಜಾಡುತ್ತಿದ್ದರೆಂದು ಪೋಲಿಸರು ಅವರ ವಾಸಸ್ಥಾನಗಳ ಮೇಲೆ ಧಾಳಿ ನಡೆಸಿ ಹೊಡೆದು ಕೆಲವರನ್ನು ದಸ್ತಗಿರಿ ಮಾಡಿದ್ದಕ್ಕಾಗಿ ಅಲ್ಲಿ ಸಾವಿರ ನಾನೂರು ಮಂದಿ ಗುಡಿಸುವವರು ಮುಷ್ಕರ ಹಿಡಿದಿದ್ದರು.

ಲಕ್ನೋ, ಡಿ 14 — ಭಾರತಕ್ಕೆ ಬರುವ ಪಾರ್ಲಿಮೆಂಟಿನ ಸದಸ್ಯರಾರೆಂಬುದನ್ನು ಗಾಂಧೀಜೀಗೆ ತಿಳಿಸಲಾಗಿದೆಯೆಂದೂ ಸರ್ ಕ್ರಿಪ್ಸರು ವೈಸ್ರಾಯಿಲಾಲರಿಗೆ ಟೆಲಿಫೋನ್ ಮಾಡಿದರೆಂದು ಹೇಳಲಾಗಿದೆ.

.....

ಕಲ್ಕತ್ತಾ ಡಿ 14 — ಮಹಾತ್ಮ ಗಾಂಧೀಜೀಯವರು ಇದೇ ತಾ || 20 ರವರಗೆ ಕಲ್ಕತ್ತಾದಲ್ಲಿರುವರು.

.....

ಪೆಹರ್ವಾ, ಡಿ 14 — ಅಜರ್ಬೈಜಾನ್ ಪರ್ಷಿಯಾಕ್ಕೆ ಹೋದಂತೆಯೇ ಸರಿ. ಅದು ದಂಗೆಕೋರರ ನಶವಾಗಿದೆ.

ಸಯಾಂನಲ್ಲಿ ಬ್ರಿಟಿಷ್ ನೀತಿ
ಅಮೆರಿಕನರ ವಿರಳ ಖಂಡನೆ

ಕತ್ತಿ

ಕತ್ತಿಯು ಭಾರತದಲ್ಲಿ ಬಹು ಕಾಲದಿಂದಲೂ ಬಳಕೆಯಲ್ಲಿದೆ. ಹಿಂದೂಗಳು ಇದನ್ನು ತಲ್ವಾರ ಎಂತಲೂ ಮಹಮದೀಯರು ಷಂಷೀರ್ ಎಂತಲೂ ಕರೆಯುವ ವಾಡಿಕೆ. ಮೊಗಲ್ ಬಾದ್‌ಷ ಅಕ್ಬರಿನ ಬಳಿ 30 ಕತ್ತಿಗಳಿದ್ದವೆ. ಅ ನೇಕವುಗಳ ಹಿಡಿಗೆ ರತ್ನ ಕೆತ್ತಿದ್ದವು. ಇವೆಕ್ಕೆಲ್ಲಾ ಬೇರೆಬೇರೆ ಹೆಸರಿಡಲಾಗಿತ್ತು. ಇವಕ್ಕೆಲ್ಲ ಬೇರೆ ಬೇರೆ ಹೆಸರಿದ್ದಿತು. ಪ್ರತಿದಿನ ರಾತಿ ಅತನು ಮಲಗುವ ಮನೆಗೆ ಸರಿ ಮೇರೆ ಒಂದೊಂದು ಬೇರೆ ಕತ್ತಿ ಕಳಿಸಲಾಗುತ್ತಿತ್ತು.

.....

ತಿರುಚನಾಪಳ್ಳಿ ಡಿ 13 — ಬ್ರಾಹ್ಮಣ ಹುಡುಗರಿಗೆ ವೈದೀಕ ವಿದ್ಯಾಭ್ಯಾಸವನ್ನು ಕೊಡುವ ಯೋಜನೆಯನ್ನು ಶ್ರೀ ಕಾಮಕೋಟಿ ಪೀಟದ ಶ್ರೀ ಶಂಕರಾಚಾರ್ಯರು ಪೇಲೂರಿನಲ್ಲಿ ನಡೆದ ಸನ್ಮೇಳನದಲ್ಲಿ ವಿವರಿಸಿದರು.

ಂ ಂ

ಹ್ಯಾಂಬರ್ಗ್ ಡಿ 14 — ಬೆಲ್ಸನ್ ನಾಜೀ ಕ್ಯಾಂಪಿನವರಾದ ಒಂಬತ್ತು ಜನರಿಗೆ ಕಳೆದ ತಿಂಗಳಲ್ಲಿ ವಿಧಿಸಲಾಗಿದ್ದ ಮರಣದಂಡನೆಯಂತೆ ನಿನ್ನೆ ಅವರುಗಳನ್ನು ನೇಣುಹಾಕಲಾಯಿತು.

ಂ ಂ

ಕರಾಚಿ, ಡಿ 13 — ಸ್ಟ್ಯಾಂಡರ್ಡ್ ಒಬ್ಬೆ ಯೋಜನೆಯು ಶೀಘ್ರದಲ್ಲೆ ಮುಕ್ತಾಯವಾಗುವುದೆಂದು ಹೇಳಲಾಗಿದೆ

ಜಾವಾ ಮತ್ತು ಸಯಾಂನಲ್ಲಿ ಬ್ರಿಟಿಷರು ಅನುಸರಿಸುತ್ತಿರುವ ನೀತಿ ಆರ್. ಏ. ಎಫ್. ವಿಮಾನಗಳ ಮತ್ತು ಸೈನದ ಕಾರ್ಯಾಚರಣೆಗಳನ್ನೂ ಅಲ್ಲಿ ಜಾರಿಗೆ ತಂದಿರುವ ಸೆನ್ಸಾರ್ ಪದ್ಧತಿಯನ್ನು ಅಮೇರಿಕಾ ತೀವ್ರವಾಗಿ ಖಂಡಿಸುತ್ತದೆ

ಂ ಂ

ವಾಷಿಂಗ್ಟನ್ ಡಿ 15— ಪ್ರೆಸಿಡೆಂಟ್ ಟ್ರೂಮನ್ನರು ಚೀಣಾದ ಅಂಕರ್ಯುದ್ಧ ನಿಲ್ಲಲೆಂದೂ, ಒಂದು ಎಲ್ಲಾ ಪಕ್ಷ ಸಭೆ ನಡೆಯಲೆಂದೂ ಹೇಳಿದ್ದಾರೆ

ಂ ಂ

ಸಿಬ್‌ಸಾಗರ್ ಡಿ 15— ಅಸ್ಸಾಮಿನ ಪ್ರವಾಸದಲ್ಲಿ ಪಂ || ನೆಹರೂರವರು ಪ್ರಥಮ 14 ಘಂಟೆಗಳಲ್ಲಿ 14 ಮಾಟಿಂಗುಗಳಲ್ಲಿ ಭಾಷಣ ಮಾಡಿದರು- ಒಟ್ಟು 1 ಲಕ್ಷ ಮಂದಿ ಹಳ್ಳಿಗರು ಭಾಷಣ ಕೇಳಿದರು-

ಂ ಂ

ಕೊಲಂಬೋ, ಡಿ 14 — ಸಿಲೋನಿನ ಒಂದು ತೆಂಗಿನ ತೋಟದಲ್ಲಿ ಆರ್.ಏ.ಎಫ್ ವಿಮಾನವು ಮುರಿದು ಬಿದ್ದು ಏಳು ಮಂದಿ ಮಡಿದರ

ಂ ಂ

ಟೋಕಿಯೋ, ಡಿ 16 — ಮಾಜಿ ಜಪಾನ್ ಮಹಾ ಪ್ರಧಾನಿ ಕೊನೊಯಿರವರು ಶನಿವಾರ ರಾತ್ರೆ ವಿಷ ಕುಡಿದು ಪ್ರಾಣತ್ಯಾಗಮಾಡಿರುವರು. ಮೆಕ್ಕಾರ್ಥರರು ಹತ್ತು ದಿವಸಗಳ ಹಿಂದೆ ಇವರ ದಸ್ತಗಿರಿ ಮತ್ತು ವಿಚಾರಣೆಗೆ ಆಜ್ಞೆ ಮಾಡಿದ್ದರು. ಇವರು ಮೂರು ಸಾರಿ ಜಪಾನ್ ಮುಖ್ಯ ಮಂತ್ರಿಯಾಗಿದ್ದರು.

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಕರಿಂದ)

ಮೇಷ — ಚಿತ್ತ ಚಾಂಚಲ್ಯ, ಆರ್ಥಿಕ ಮುಗ್ಗಟ್ಟು ಸಜ್ಜನರಿಂದಿಗೆ ದ್ವೇಷ. ಅದರೆ ದೇಹಾರೋಗ್ಯವಿರುತ್ತದೆ.

ವೃಷಭ — ಆರೋಗ್ಯ ಆರ್ಥಿಕ ಲಾಭಗಳುಂಟು. ಮಾನಸವು ಉತ್ಸಾಹದಿಂದ ಕೂಡಿರುತ್ತದೆ. ವ್ಯವಹಾರದಲ್ಲಿ ಯಶೋಲಾಭವುಂಟು.

ಮಿಥುನ — ಧನಲಾಭವುಂಟು. ಶಾರೀರಿಕ ಸುಖವುಂಟು ವ್ಯವಹಾರದಲ್ಲಿ ಮಾತ್ರ ಜಾಗ್ರತೆಯಾಗಿ ವರ್ತಿಸದಿದ್ದಲ್ಲಿ ಹಾನಿಬರುವ ಸಂಭವವಿದೆ.

ಕರ್ಕಾಟಕ — ಅನಾರೋಗ್ಯ ಭಯ ಮಾನಸಿಕ ಸಂತಾಪ. ವ್ಯವಹಾರದಲ್ಲಿ ದುಃಖ. ಆರ್ಥಿಕ ಮುಗ್ಗಟ್ಟು. ಇವು ಈ ವಾರ ನಿಮ್ಮ ರಾಶಿಗೆ ಸಂಭವಿಸಿದೆ.

ಸಿಂಹ — ದೇಹವು ಅಲಸ್ಯವಾಗಿರುವುದು. ಮಾನಸವು ಅಶಾಂತಿಯಿಂದ ಕೂಡಿರುತ್ತದೆ. ವ್ಯವಹಾರದಲ್ಲಿ ಕಷ್ಟ ನಿಷ್ಠುರಗಳ ಭಯವಿರುತ್ತದೆ. ಸಾಲ ಮಾಡಬೇಕಾಗಬಹುದು.

ಕನ್ಯಾ — ಆರೋಗ್ಯ ಜಯ ಕೀರ್ತಿ ಇವು ಈ ವಾರ ನಿಮಗಿರ'ವುದು.

ತುಲಾ — ಮನಸ್ಸು ಹರ್ಷದಿಂದ ಕೂಡಿರುತ್ತದೆ. ಆರೋಗ್ಯವು ಚನ್ನಾಗಿರುತ್ತದೆ. ಸತ್ಸಾಹವಾಸವು ಲಭಿಸುತ್ತದೆ. ವ್ಯವಹಾರದಲ್ಲಿ ಯಶಪ್ರಾಪ್ತಿಯಾಗುತ್ತದೆ.

ವೃಶ್ಚಿಕ — ಸರ್ವತೋಮುಖವಾಗಿ ನೀವು ಆನಂದ ಸುಖಗಳನ್ನು ಉಪಯೋಗಿಸುವಿರಿ.

ಧನಸ್ಸು — ಶಾರೀರಕ ಸುಖವಿರುವುದಿಲ್ಲ. ಆರ್ಥಿಕ ಲಾಭವಿರುವುದಿಲ್ಲ. ಕಲಹ ಪ್ರೇಮಿಗಳಿಂದ ದೂರವಾಗಿರಿ.

ಮಕರ — ಮಾನಸಿಕ ಸ್ಥಿತಿಯು ಕೆಟ್ಟಿರುತ್ತದೆ. ಚಿಂತಾಮಯವಾಗಿರುವಿರಿ. ವ್ಯವಹಾರದಲ್ಲಿ ಅಡಚಣೆಗಳು ಹೆಚ್ಚುವುವು.

ಕುಂಭ — ಶಾರೀರಕ ಮಾನಸಿಕ ಆರ್ಥಿಕ ಸಾಮಾಜಿಕ ಪರಿಸ್ಥಿಗಳು ಹರ್ಷದಾಯಕವಾಗಿರುತ್ತದೆ.

ಮೀನ — ವ್ಯವಹಾರದಲ್ಲಿ ಕೀರ್ತಿಯು ಲಭಿಸುವುದು ಆರೋಗ್ಯವಿರುತ್ತದೆ. ಮನೋಲ್ಲಾಸವಿದೆ.

ನೆಹರು ಸಭೆಯಲ್ಲಿ ಗೊಂದಲ

ಸಹರಾನಪುರ ನ. 23

ಚುನಾವಣಾ ಪ್ರಚಾರಕ್ಕಾಗಿ ಒಂದಿರುವ ಪಂಡಿತ ನೆಹರು ಇಂದು ಒಂದು ಬಹಿರಂಗ ಸಭೆಯಲ್ಲಿ ಭಾಷಣ ಮಾಡಿದರು. ಭಾಷಣಕ್ಕೆ ಮುಂಚೆ ರ್ಯಾಡ್ಕಿಲ್ ಡೆಮೊಕ್ರಾಟ್‌ಗಳು ಒಂದು ಪ್ರಶ್ನಾವಳಿಯನ್ನು ಮುದ್ರಿಸಿ ಹಂಚಿದ್ದರು. ಪಂಡಿತರಿಗೂ ಒಂದು ಪ್ರತಿ ಕೊಡಲಾಯಿತು. ನೆಹರು ಭಾರತದ ವ್ಯವಸಾಯಕ್ಕೆ ಸಂಬಂಧಪಟ್ಟ ವಿಷಯವನ್ನೇ ಮಾತನಾಡಲಿಲ್ಲ. ರಾಡಿಕಲ್ ಪ್ರಶ್ನಾವಳಿಗೂ ಉತ್ತರ ಕೊಡಲಿಲ್ಲ ಕೊನೆಗೆ ಪ್ರೇಕ್ಷಕರಲ್ಲಿ ಹಲವರು ಪ್ರಶ್ನೆ ಹಾಕಿದರು. ನೆಹರು ಕೋಪೋದ್ರಿಕ್ತರಾಗಿ ಉತ್ತರ ಕೊಡಲು ನಿರಾಕರಿಸಿದರು. ಆಗ ಗಲಾಟೆಯೆದ್ದಿತು. ಹಲವರು 'ಪಂಡಿತರಿಗೆ ಬಿರ್ಲಾ ಎಷ್ಟು ಹಣ ಕೊಟ್ಟಿದ್ದಾರೋ ?' ಎಂದರು. ಪಂಡಿತರು ಕೋಪದಿಂದ 'ಕೊಟ್ಟಿದ್ದಾರೆ, ನನಗೆ ಬೇಕಾದಷ್ಟು ಕೊಡುತ್ತಾರೆ' ಎಂದು ಒಪ್ಪಿಕೊಂಡರು. ಸಭೆಯು ಅರ್ಧದಲ್ಲಿ ಕೊನೆಗೊಂಡಿತು— (ಪಿ)

ದಿ ಹೇಗ್, ಡಿ 12 — ಹಿಟ್ಲರಿಂದ 'ನೆದರಲೆಂಡಿನ ಜನತೆಗೆ ಫ್ಯೂರರ್' ಎಂದು ಕರೆಯಲ್ಪಟ್ಟಿದ್ದ ಮತ್ತು ಡಚ್ ರಾಷ್ಟ್ರೀಯ ಸಮತಾವಾದಿಗಳ ಮಾಜಿ ನಾಯಕ ಡಾ || ಏಂಟ್ಜೆಮೆಸರ್ಟ್‌ಗೆ ವಿಶೇಷ ಡಚ್ ನ್ಯಾಯಾಸ್ಥಾನವು ಮರಣದಂಡನೆಯನ್ನು ವಿಧಿಸಿದೆ.

o o

ಗಾಂಧೀ–ವೇವಲ್ ಮತ್ತೆ ಕಲ್ಕತ್ತಾದಲ್ಲಿ ಭೇಟಿಯಾಗುವರೆಂದೂ, ಅದಕ್ಕಾಗಿ ಗಾಂಧೀಜೀ ವಿಶ್ವಭಾರತಿ ಪ್ರಯಾಣವನ್ನು ಮುಂದುವರಿಸಿರುವರೆಂದೂ ತಿಳಿಯಬಂದಿದೆ.

o o

ಆಂಧ್ರ ವಿಶ್ವವಿದ್ಯಾನಿಲಯದ ದ್ವಿತೀಯ ಘಟಿಕೋತ್ಸವ ಸಮಾರಂಭದಲ್ಲಿ ಸರ್ ರೆಡ್ಡಿಯವರು ಮಾತನಾಡುತ್ತಾ ಸರ್ಕಾರಕ್ಕೂ ಕಾಂಗ್ರೆಸಿಗೂ ಘರ್ಷಣೆಯಾಗುವ ಸಂಭವವಿದೆಯೆಂದರು.

o o

ಬ್ರಿಟಿಷ್ ಅಮೇರಿಕಾ ಹಣ ಕಾಸಿನ ಒಪ್ಪಂದದ ಬಗ್ಗೆ ಕಾಮನ್ಸ್ ಸಭೆಯಲ್ಲಿ ಅಂಗೀಕಾರ ದೊರೆತಿದೆ.

ಕಳೆದವಾರ

ಲಂಡನ್, ಡಿ 9 — ಮಾಸ್ಕೋದಲ್ಲಿ ವಿದೇಶಾಂಗ ಸಭೆ ನಡೆಯುವುದೆಂಬ ಪ್ರಸ್ತಾಪದ ಪ್ರಸಿದ್ಧಿ ಬಗ್ಗೆ ನೋಡಿದರೆ ರಷ್ಯಾಕ್ಕೂ ಅಣುಬಾಂಬಿನ ರಹಸ್ಯದಲ್ಲಿ ಭಾಗವಹಿಸಲು ಆಹ್ವಾನ ದೊರೆಯಬಹುದೆಂದು ರಾಜಕೀಯವೇತ್ತರ ಅಭಿಮತವಾಗಿದೆ

ಲಂಡನ್, ಡಿ — ಅಣುಬಾಂಬು ಶಕ್ತಿಯನ್ನು ಅಭಿವೃದ್ಧಿಗೊಳಿಸುವ ವಿಷಯದಲ್ಲಿ ಅಮೇರಿಕಾಕ್ಕೆ ಮಾತ್ರ ಹಕ್ಕಿರಬೇಕೆಂದು ಅಧ್ಯಕ್ಷ ರೂಸ್ವೆಲ್ಟರು ಮತ್ತು ಚರ್ಚಿಲರಿಗೂ ಆದ ರಹಸ್ಯ ಒಪ್ಪಂದವನ್ನು ಟ್ರೂಮನ್ ಮತ್ತು ಅಟ್ಲಿಯವರು ರದ್ದುಗೊಳಿಸಿದ್ದಾರೆ.

ನೂರೆಂಬರ್ಗ್, ಡಿ 10 — ನಾಜಿ ಯುದ್ಧ ಪಾತಕಿಗಳ ವಿಚಾರಣೆಯಲ್ಲಿ ರಷ್ಯಾ ಆಕ್ರಮಣಕ್ಕಾಗಿ ಹಿಟ್ಲರು ತಯಾರಿಸಿದ್ದ ಟೈಂಟೇಬಲ್ಲು ಮತ್ತು ಪ್ಲಾನುಗಳನ್ನು ಹಾರ್ಮಾಡಲಾಗಿದೆ.

ನಾವು ಭಾರತವನ್ನು ಬಿಡಲು ಕಾಲ ಎಣಿಗಿದೆಯೆಂದು ಲಂಡನ್ ಟೌನ್ ಹಾಲಿನಲ್ಲಿ ಮಾಡಿದ ಭಾಷಣದಲ್ಲಿ ಪ್ರೊ || ಲಾಸ್ಕಿ ತಿಳಿಸಿರುವರು.

ಕಲ್ಕತ್ತಾ, ಡಿ 10 — ಗಾಂಧಿ ವೆವಲ್ ಮಾತುಕತೆ ಸರ್ಕಾರಿ ಭವನದಲ್ಲಿ ನಡೆಯಿತು.

ಹೊಸದಾಗಿ ಸ್ಥಾಪಿತವಾದ ಆರಾಬ ಹಿಂದ್ ಪಕ್ಷವು ಡಾಕ್ಕಾ ಯೂನಿವರ್ಸಿಟಿ ಜಗನ್ನಾಥ ಯೂನಿಯನ್ ಹಾಲಿನಲ್ಲಿ 20 ಸ್ಥಾನಗಳಲ್ಲಿ 19 ಸ್ಥಾನಗಳಿಸಿದೆ.

ಲಕ್ನೊ, ಡಿ 9 — ಪಯೋನೀರ್ ಪತ್ರಿಕೆಯಲ್ಲಿ ಪ್ರಕಟವಾಗಿರುವ ಹಿಂದು ಪಂದಿಯಂತೆ ಆ ಪ್ರಾಂತ್ಯದ ಪೋಲೀಸಿನ ಮುಖ್ಯಸ್ಥರು ಬಿಡುಗಡೆಯಾಗಿರುವ ಹಿಂದ್ ಫೌಜಿನ ಜನರ ವೈಲೆ ಕಣ್ಣಿಟ್ಟಿರಬೇಕೆಂದು ಅಜ್ಞೆಯಾಗಿದೆ.

ಬೊಂಬಾಯಿ, ಡಿ 21 — ಶ್ರೀ ಜಯಪ್ರಕಾಶ ನಾರಾಯಣ ಮುಂತಾದ ಡೆಟಿನ್ಯೂಗಳ ಸಂಬಂಧಪಟ್ಟ ಕಾಗದ ಪತ್ರಗಳನ್ನು ಭಾರತ ಮಂತ್ರಿಗೆ ಕಳುಹಿಸಿರುವುದಾಗಿ ತಿಳಿಯಬಂದಿದೆ.

ಕಾಶಿಯಲ್ಲಿ ಜಾರಿಗೆ ಬಂದ ಹಿತ್ತಾಳೆ ಮತ್ತು ತಾಮ್ರದ ನಿಯಂತ್ರಣ ಆಜ್ಞೆಯಂತೆ ಪಾತ್ರೆಗಳ ವೇಲೆ ಖರೀದಿಯನ್ನು ಮುದ್ರಿಸಬೇಕೆಂಬ ವಿಧಿಯನ್ನು ಪ್ರತಿಭಟಿಸಲು ಇಲ್ಲಿಯ 150 ಹಿತ್ತಾಳೆ ತಾಮ್ರ ವ್ಯಾಪಾರಸ್ಥರು 22 ದಿವಸಗಳಿಂದ ತಮ್ಮ ಅಂಗಡಿಗಳನ್ನು ಮುಚ್ಚಿದ್ದುವೊನ್ನೆ ತೆಗೆದರು.

ಗಿರಣಿಗಳು ಭಾರತವನ್ನು ಬಿಡಬೇಕೆಂದು ಶ್ರೀ ಕುಮಾರಪ್ಪನವರು ಅಭಿಪ್ರಾಯ ಪಟ್ಟಿದಾರೆ.

ಕಲ್ಕತ್ತಾ, ಡಿ 12 — ನಿನ್ನೆ ದಿನ ಇಲ್ಲಿಯ ಸ್ಪಾಕ್ ಎಕ್ಸ್‌ಚೆಂಜಿನ ಸಂಘದ ಸದಸ್ಯರು ಪಂ || ನೆಹರೂರವರಿಗೆ ಚುನಾವಣೆಗೆ ಉಪಯೋಗಿಸಲು ಒಂದು ಲಕ್ಷ ರೂ ಚೆಕ್ಕು ಕೊಟ್ಟರು. ಕಾಂಗ್ರೆಸಿನ ಕೆಲಸಗಾರರಿಗೆ ಈ ಸಮಿತಿಯಿಂದ ಹಣ ದೊರೆತುದು ಇದೇ ಮೊದಲು.

ಅಸ್ಸಾಂನಿಂದ ಶಾಸನ ಸಭೆಗೆ 5 ಮಂದಿ ಕಾಂಗ್ರೆಸ್ಸಿನವರು ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿಸಲ್ಪಟ್ಟಿದಾರೆ.

ವಾಷಂಗ್ಟ್ ಡಿ 10— ನ್ಯೂಸ್ ಪ್ರಿಂಟ್ ಕ್ರಯವು ಸ್ವಲ್ಪ ಹೆಚ್ಚಿದೆ.

o o

ಕಡಪಾದಲ್ಲಿನ ಸಬ್ ಮ್ಯಾಜಿಸ್ಟ್ರೇಟರು ಮೊಹರಂ ಕಾಲದಲ್ಲಿ ಹಿಂದೂ ಮೆರವಣಿಗೆಗಳನ್ನು ನಿರ್ಬಂಧಿಸಿದ್ದಾರೆ.

o o

ನಾಗಪುರ ಡಿ 10— ಬಾಲಘಾಟಿನ ಬ್ಯಾರಿಸ್ಟರ್ ಶ್ರೀ ವರ್ಮರೆಂಬುವರು, ನ್ಯಾಯಾಧೀಶರನ್ನು ಕುರಿತು 'ಗುಡ್ ಮಾರ್ನಿಂಗ್' ಅಂದಾಗ 'ಸರ್' ಪದವನ್ನು ಸೇರಿಸದಿದ್ದಕ್ಕಾಗಿ, ಕೋರ್ಟಿಗೆ ಅಪಮಾನ ಮಾಡಿದಂತಾಯಿತೆಂದು ರೂ. 50 ಜುಲ್ಮಾನೆ ಹಾಕಲಾಗಿದ್ದಿತು. ಇದರ ಮೇಲೆ ಶ್ರೀ ವರ್ಮರು ನಾಗಪುರದ ಹೈ ಕೋರ್ಟಿನಲ್ಲಿ ಮಾಡಿದ್ದ ಅಪೀಲನ್ನು ಜಡ್ಜರು ತಳ್ಳಿಹಾಕಿದರು.

o o

ಚಿತ್ತೂರು ಡಿ 8— ಬೆಂಗಳೂರಿನಿಂದ ಗುಡಿಯಾರಮ್ಮಿಗೆ ಸದರ್ನ್ ಆರ್ಮಿಯ ಇಬ್ಬರು ಸಿವಿಲಿಯನ್ ಡ್ರೈವರು ಮಿಲಿಟರಿ ಲಾರಿಯಲ್ಲಿ ರೂ. 2500 ಬೆಲೆಯ ನೂಲನ್ನು ಸಾಗಿಸುತ್ತಿದ್ದಕ್ಕಾಗಿ ದಸ್ತಗಿರಿ ಮಾಡಲ್ಪಟ್ಟರು.

o o

ಲಂಡನ್ ಡಿ 12— ಲಾರ್ಡ್ಸ್ ಸಭೆಯಲ್ಲಿ ನಾಳೆ ಲಾರ್ಡ್ ಹಾಹಾರವರ ವಿಚಾರಣೆ ಓಬೇರಾಯನ ಕಾಲದ ಮಾಗ್ನಾ ಚಾರ್ಟಾದ ಸಹಾಯದಿಂದಾದ ಮರಣದಂಡನೆ ತಪ್ಪಿಸಿಕೊಳ್ಳಲು ಹವಣಿಸುತ್ತಿದ್ದಾನೆ ಈ ಭೂಪ !

o o

ಒಟಾವಿಯಾ ಡಿ 11— ಸಿಂಗಪುರದಲ್ಲಿ ಇಂಡೋನೇಷ್ಯೆ ವ್ಯವಸ್ಥೆ ಬಗ್ಗೆ ಮಿತ್ರ ಪರ ಮುಖಂಡರ ಸಮಿತಿಯು ಆದ ತೀರ್ಮಾನವು ಇಂಡೋನೇಷಿಯನ್ನರಿಗೆ ಹಿತಕರವಾಗಿಲ್ಲವೆಂದೂ, ಡಚ್ಚರೊಡನೆ ಅವರು ಸಂಧಾನ ನಡೆಸಬೇಕೆಂದೂ, ತಪ್ಪಿದಲ್ಲಿ ಮಿತ್ರರ ಭಾರಿ ಸೈನ್ಯ ಕಾಸ್ಯಾಚಣೆಗೆ ತುತ್ತಾಗಬೇಕೆಂದೂ ಬೆದರಿಕೆ ಒಡ್ಡಿರುವರು.

o o

ಆಜಾದ್ ಫೌಜಿನ ಅಧಿಕಾರಿ ಷಾನವಾಜರ ಉಮೇದುವಾರಿಕೆ (ಪಂಜಾಬಿನ ಕ್ಷೇತ್ರ) ಯನ್ನು ಪ್ರತಿಸ್ಪರ್ಧಿಯೊಬ್ಬ ನಿಂತಿದ್ದಕ್ಕಾಗಿ ವಾಪಸು ತೆಗೆದುಕೊಳ್ಳಲಾಗುವುದು.



ನೌಕೆಯು ಕೆಲಸ ಮಾಡುವ ವಿಧಾನ

ಆಟಂ ಬಾಂಬಿಗೆ ಒಂದು ಕೈ ಮೇಲೆ

ರಷ್ಯಾದ ವಿಜ್ಞಾನಿಗಳು ಭರತ ಖಂಡಕ್ಕೆ ಈಶಾನ್ಯ ದಿಕ್ಕಿನಲ್ಲಿರುವ ಹಿಂದೂ ಕುಡ್ ಪರ್ವತ ಶ್ರೇಣಿಯುಲ್ಲಿ ಸೂರ್ಯ ರಶ್ಮಿಯಿಂದ ಶಕ್ತಿಯನ್ನು ಪಡೆಯಲು ಅತಿ ಸಾಹಸದಿಂದ ಶೋಧನೆ ನಡೆಸಿರುವದು. ಇದು ಫಲಕಾರಿಯಾದರೆ ಆಟಂ ಬಾಂಬು ಆಸೆಗುಂದಿ ಆಡನ್ನು ನಿಲ್ಲಿಸಿದಂತೆ ಆಗುವದು.

ಜೋಗ್‌ನಲ್ಲಿ ಹೊಡೆದಾಟ

ಕಳೆದ ಮಾಹೆ 29 ರಂ ಮಧ್ಯರಾತ್ರಿಯುಲ್ಲಿ ಜೋಗ್ ವಿದ್ಯುಚ್ಛಕ್ತಿ ಖಾರ್ಕಾನೆಯಲ್ಲಿ ಎರಡು ಸಾವಿರ ಮಂದಿ ಒಡ್ಡರಿಗೂ ಎಂಜಿನಿಯರ್ ಮಂದಿ ಪಠಾಣರಿಗೂ ಘರ್ಷಣೆ ನಡೆದು ಅನೇಕರಿಗೆ ತೀವ್ರ ಗಾಯವಾಗಿರುವುದಾಗಿ ತಿಳಿಯುಬಂದಿದೆ.

ಮುನ್ನೂರಡಿ ಕೆಲಸವಿದೆ

ಶಿವನಸಮುದ್ರ ವಿದ್ಯುಚ್ಛಕ್ತಿ ನಿಲ್ದಾಣದಲ್ಲಿ ಯಂತ್ರಗಳಿಗೆ ದರ್ಘಟನೆ ನಡೆದುದು ದುರಸ್ತು ಆಗುತ್ತಿರುವುದಾಗಿಯು ಇನ್ನು ಮುನ್ನೂರು ಅಡಿಗಳಲ್ಲಿ ಕೆಲಸವಿರುವುದಾಗಿಯೂ ತಿಳಿಯಬಂದಿದೆ.

ಲಿಂಗವನ್ನು ಒಡಿದಿರುವರು

ಆದವಾನಿಯಲ್ಲಿ ಪ್ರಸಿದ್ಧಿ ಪಡೆದಿದ್ದ ಶಾಂತಿಮೂರ್ತೇಶ್ವರ ಲಿಂಗವನ್ನು ಯಾರೋ ಗೂಂಡಾ ಜನರು ಪುಡಿಪುಡಿಯಾಗಿ ಒಡೆದುಹಾಕಿರುವರು.

ಅಟಂ ಬಾಂಬಿನ ಸಂದೇಶ

ಡಿ. ಸಿ. ಡ್ಯೂಪರ್ರವರು ಹೀಗೆ ನುಡಿದಿರುವರು.— ಶ್ರೀ ಗಾಂಧಿಯವರು ಪ್ರೇಮ ಸಾಮ್ರಾಜ್ಯ ಸಿಂಹಾಸನಾಸೀನರಾಗಿ ವಿವಿಧ ದೇಶಗಳನರಲ್ಲಿ ಶಾಂತಿ ಸ್ನೇಹಗಳಿರೆಬೇಕೆಂದು ಬೋಧಿಸುತ್ತಿರುವರು. ಅದೇ ಸಂದೇಶವನ್ನು ಭಯಾನಕ ಪಾತಾಳದಿಂದ ಆಟಂಬಾಂಬು ಘೋಷಿಸುತ್ತಿದೆ. ಅದರ ಸಂದೇಶ— ಐಕಮತ್ಯವು ಎಲ್ಲರಲ್ಲಿಯೂ ಇಲ್ಲದಿದ್ದಲ್ಲಿ ನಾಗಸಾಕಿ ಪಟ್ಟಣಕ್ಕೆ ಪ್ರಾಪ್ತವಾದ ಗತಿಯೇ ಎಲ್ಲರಿಗೂ !

ಪ್ರಥಮ ಜಾಗತಿಕ ಯುದ್ಧದಲ್ಲಿ (1914–18) ಬ್ರಿಟೈನಿನ ಮೇಲೆ ನೂರೆಂಟು ಜಾರಿ ಶತ್ರು ವಿಮಾನಗಳು ಧಾಳಿ ಮಾಡಿವೆ. ಆದರೆ ಸಲವತ್ತಾಗು ಧಾಳಿಗಳಲ್ಲಿ ಒಬ್ಬನಿಗಾದರೂ ಹಾನಿಯಾಗಲಿಲ್ಲ.

ವಿಷವಾಯು

ಈಚೆಗೆ ಮಿತ್ರಮಂಡಲಿಗೆ ಲಭ್ಯವಾದ ಎರಡೂವರೆ ಲಕ್ಷ ಟನ್ನುಗಳ ಜರ್ಮನಿಯ ವಿಷವಾಯುವನ್ನು ಡೆನ್ಮಾರ್ಕು ನಾರ್ವೆಗಳ ನಡುವೆ ಉತ್ತರ ಸಮುದ್ರದಲ್ಲಿ ಬಿಡುವುದು ಒಳ್ಳೇದೆಂದು ನಿರ್ಧರಮಾಡಿರುವರು ಇದರಿಂದ ಆ ಸಮುದ್ರ ತೀರ ವಾಸಿಗಳಿಗೆ ಪ್ರತ್ಯಕ್ಷವಾಗಿಯಾಗಲೀ ಅಪ್ರತ್ಯಕ್ಷವಾಗಿಯಾಗಲಿ, ಯಾವ ಬಗೆಯು ತೊಂದರೆಗಳುಂಟಾಗುವವೋ ಯೋಚಿಸ ಬೇಕು ! ಕೊನೆಯಿಲ್ಲಿದೆ ನೌಕಾಯುದ್ಧವು ನಡೆದ ಹಿಂದೂ ಸಮುದ್ರದ ನೀರಿನಿಂದ ತಯಾರಿಸಲ್ಪಟ್ಟ ಉಪ್ಪನ್ನು ತಿನ್ನುವಿಕೆಯಿಂದಲೇ ಹಲವು ಮಂದಿ ಸಮುದ್ರ ತೀರವಾಸಿಗಳಿಗೆ ಕಜ್ಜಿ ತುರಿ, ಮೊದಲಾದವು ಬಂದವೆಂದು ತಿಳಿಯ ಬಂದಿದೆ ಮನುಷ್ಯ ಮರ್ಕಟ ಬುದ್ಧಿಯಿಂದ ಮಾಡುವ ಕೆಲಸಗಳನ್ನು ಸಾಧ್ಯದ್ದಿಯಳ್ಳವರು ಸರಿಪಡಿಸುವುದು ಎಷ್ಟು ಕಷ್ಟಸಾಧ್ಯವೋ ಇದರಿಂದ ಸ್ಪಷ್ಟವಾಗುವುದು.

.....

ಲಕ್ನೋ ಹೋಟಲೊಂದರ ಮಾಲಿಕ ಸುಲ್ತಾನ್ ವಿಜಾರ್ದಾರವರು ' ಸೌಂದರ್ಯ ಸ್ಪರ್ಧೆ ' ಯನ್ನು ಏರ್ಪಡಿಸಿರುವರು. ಮಿಸ್ ಲಕ್ನೋವಿನ ಆಯ್ಕೆ ಆಗಲಿದೆ.

ಂ ಂ

ಅಮೇರಿಕಾದ ಕ್ಲೀವ್ಲೆಂಡಿನ ಜೇಕೊಲೊಜೆಜ್ ಎಂಬ ಹೆಂಗಸು ತನ್ನ ಗಂಡನು ಹುಚ್ಚನೆಂದು ಅಧಿಕಾರಿಗಳಿಗೆ ಅರ್ಜಿ ಹಾಕಿ, ಅವನನ್ನು ಆಸ್ಪತ್ರೆಗೆ ಸೇರುವಂತೆ ಮಾಡಿದಳು. ಮತ್ತೆ ಮರಳಿ ಒಂದು ' ನಾನು ಸುಳ್ಳುಹೇಳಿದೆ. ನನ್ನ ಗಂಡನಿಲ್ಲದೆ ಜೀವಿಸಲಾರೆ ' ಎಂದು ಆಸ್ಪತ್ರೆ ಮುಂದೆ ನಾಲ್ಕು ದಿನ ಉಪವಾಸ ಮಾಡಿ ಗಂಡನನ್ನು ಮರಳಿ ಪಡೆದಳು. ಕೆಲಕಾಲದಲ್ಲೇ ಆ ಮಹಾಶಯನು ಎರಡಡಿ ಉದ್ದ ಕಬ್ಬಿಣದ ನಳಿಗೆಯಿಂದ ಅವಳನ್ನೂ ತನ್ನ ಇಬ್ಬರು ಮಕ್ಕಳನ್ನೂ ಹೊಡೆದು ಕೊಂದನು.

ಂ ಂ

ಕಾಮನ್ಸ್ ಸಭೆಯಲ್ಲಿ ಮಾರ್ಕ್ಸ್ ಹೇಳಿಕೆ ಪ್ರಕಾರ ಪಾರ್ಲಿಮೆಂಟಿನ ಆಶ್ರಯದಲ್ಲಿ ಭಾರತದ ನಿಯೋಗ ಹೊರಡುವುದು.

ಂ ಂ

ನಾನೇ ಯುದ್ಧಕ್ಕೆ ಕಾರಣನಾದುದರಿಂದ ಸಿಂಹಾಸನ ತ್ಯಾಗ ಮಾಡುತ್ತಿನೆಂದು ಜರ್ಮನ್ ಚಕ್ರವರ್ತಿ ಹೇಳಿರುವುದಾಗಿ ಅನಧಿಕೃತವಾರ್ತೆಯೊಂದು ಪ್ರಕಟವಾಗಿದೆ.

ವಿವಿಧ ವೃತ್ತ

ಪರ್ಷಿಯಾದಿಂದ ಸೈನ್ಯಗಳು ಪಾಸಾಗಬೇಕೆಂದು ಪರ್ಷಿಯಾ ವಿದೇಶಾಂಗ ಮಂತ್ರಿಯು ರಷ್ಯಾ ಅಮೇರಿಕಾ ಬ್ರಿಟನ್ನುಗಳಿಗೆ ತಿಳಿಸಿದ್ದಾನು.

ಂ ಂ

ಮುಂದಿನ ವರ್ಷದ ಕೊನೆಯಲ್ಲಿ ಅಮೆರಿಕವು 14 ವ್ಯಾಪಾರ ರಾಷ್ಟ್ರಗಳ ಸಮ್ಮೇಳನವನ್ನು ಕರೆಯುವುದು.

ಂ ಂ

ಜರ್ಮನ್ ಮೇಲಿನ ಹತೋಟಿ ಸಂಯುಕ್ತ ಮಿತ್ರಮಂಡಳದ ವಶವಿಂಬೇಕೆಂದು ರಷ್ಯಾ ಸೂಚಿಸಿದೆ.

ಂ ಂ

ಲಂಡನ್ ಡಿ 12— ಈದಿನದ ಪ್ರಾತಃಕಾಲ ರೋಂನಿಂದ ಆಶ್ಚರ್ಯಕರವಾದ ಸುದ್ದಿ ಒಂದಿದೆ. ಅದೇನೆಂದರೆ ಕಾಳಸಂತೆಕೋರರು ' ಪೋಲೀಸು ದಸ್ತಗಿರಿ ' ಯ ವಿರುದ್ಧವಾಗಿ ಮುಷ್ಕರ ಪ್ರಾರಂಭಿಸಿದ್ದಾರೆ. ಪೋಲೀಸರ ದಸ್ತಗಿರಿಯಿಂದ ತಮ್ಮ ವ್ಯಾಪಾರ ಹಾಳಾಗುತ್ತಿರುವುದೆಂದು ಕಾಳಸಂತೆಕೋರರು ಗಮನಕ್ಕೆ ತಂದಿದ್ದಾರೆ. ಕೆಲವು ವರ್ತಕರು ಮಾರ್ಕಟ್ ಬಳಿ ಸಂಚರಿಸಿ ಹರತಾಳ ಪನ್ನಾಚರಿಸಬೇಕೆಂದು ಹೇಳುತ್ತಿದ್ದರು.

ಂ ಂ

ಕಲ್ಕತ್ತಾ, ಡಿ 12 — ಸೋದಾಪುರದ ಆಶ್ರಮಕ್ಕೆ ಗಾಂಧೀಜೀಗೆ ಲಂಡನ್ನಿಂದ ಟೆಲಿಫೋಬಂತು. ವಿಷಯ ತಿಳಿದಿಲ್ಲ

ಂ ಂ

ಪ್ರತಿಬಂಧಕವಿಲ್ಲದೆ ಪ್ಯಾಲಿಸ್ತಾನಿಗೆ ಯಹೂದ್ಯರು ಪ್ರವೇಶಿಸ ಬೇಕೆಂದು ಅಮೇರಿಕಾ ಅಡಳಿತ ವಿದೇಶಾಂಗ ಸಮಿತಿ ನಿರ್ಣಯಿಸಿದೆ.

ಇದುವರೆಗೆ ಬಂಗಾಳದಲ್ಲಿ 1646 ರಾಜಕೀಯ ಖೈದಿಗಳ ಬಿಡುಗಡೆಯಾಗಿರುವದಾಗಿ ಪ್ರಕಟವಾಗಿದೆ.

ಂ ಂ

ನಮ್ಮ ವಿಷಯಗಳೂ ಮಾಸ್ಕೋ ಸಮ್ಮೇಳನದಲ್ಲಿ ಸೇರಿರುವ ಸಂಯುಕ್ತ ನಮ್ಮ ಪ್ರಾತಿನಿಧ್ಯಕ್ಕೂ ಬಾಧ್ಯತೆಯಿರುವದಾಗಿ ಪರ್ಷಿಯಾ ನಾಯಕತ್ವಯರಿಗೆ ತಿಳಿಸಿದೆ.

ಂ ಂ

ಇಂಡುನೇಷಿಯನ್ನರಿಗೆ ಸುಸೂತ್ರದ ಬೆಂಬಲವಿರುವುದಾಗಿ ಅಲ್ಲಿಯ ನಾಯಕ ಅಮಿಲ್ ತಿಳಿಸಿದ್ದಾರೆ.

ಂ ಂ

ಪ್ರಪಂಚ ಸಂಸ್ಥೆಗೆ ಯೂರೋಪಿನ ಸಣ್ಣದೊಂದು ರಾಜ್ಯದಲ್ಲಿ ಕೇಂದ್ರವಿರಬೇಕೆಂದು ಬ್ರಿಟನ್ ಒತ್ತಿ ಹೇಳಿದೆ

ಂ ಂ

ನಾಗಪುರದಲ್ಲಿ ನಡೆದ ನಿಮ್ನವರ್ಗ ಫೆಡರೇಷನ್‌ನಲ್ಲಿ ನಾವು ಕಾಂಗ್ರೆಸಿನವರಲ್ಲವೆಂದು ತೋರಿಸುವ ಸಲುವಾಗಿ ಹರಿಜನರು ಖಾದಿ ಟೋಪಿಗೆ ಬೆಂಕಿಯಿಟ್ಟರು

ಂ ಂ

ಕರಾಚಿಯ ಸಿಂಧ್ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಹಾಜರಾತಿ ಕಾಲದಲ್ಲಿ ಜೈಹಿಂದ್ ಎಂದಿದ್ದನ್ನು ಪ್ರತಿಬಂಧಿಸಿದ್ದಕ್ಕಾಗಿ ವಿದ್ಯಾರ್ಥಿಗಳು ತರಗತಿ ಪರಿತ್ಯಾಗ ಮಾಡಿದರು.

ಂ ಂ

ಸುಭಾಷರ ಫೋಟೋವನ್ನು ಪ್ರಕಂಸಿಸಕೂಡದೆಂದು ಬರ್ಮಾ ಸರ್ಕಾರದ ಆಜ್ಞೆಯಾಗಿದೆ.

ಂ ಂ

ಆಜಾದ್ ಹಿಂದ್ ಪೌಜಿನವರಿಗೆ ಕಾಂಗ್ರೆಸಿನ ರಕ್ಷಣೆ ಅಗತ್ಯವೆಂದು ಸರೋಜಿನಿ ನಾಯ್ಡು ಹೇಳಿಕೆಯಾಗಿದೆ.



ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಒಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಜಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು. ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪, ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

AT Opera— From 14-12-45

FIGHT TO FINISH

— featuring —

Jack Mull Hall — Lola Lane — Frankie Doro

Edited, Printed and published by M. S. Krishna Rao, at the Satvavadi Press, Chamaraja Agrahar, Mysore

For Good Printing

L. N. Press

Sriramp st MYSORE

ನೆಸಿಫಿಕ್ ಯುದ್ಧದ ಕ್ರೂರಕರ್ಮಿಗಳು

ಹಸಿ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವಂಡೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು.

At Ranjit

Sant Tulsi Das

ವಿಷ್ಣುಪಂತ್‌ಪಗ್ನೀಸ್, ಲೀಲಾಚಿಟ್ನಿಸ್
ವಾಸಂತಿ ಪಾತ್ರವಹಿಸಿರುವ

ಸಂತ್ ತುಳಸೀ ದಾಸ್

ಸತ್ಯವಾದಿ

ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ
ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ. ಅಂಚೆ ಪಚ್ಚ ಸೇರಿ ಪರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ
ಚಾಮರಾಜಪುರಂ, ಮೈಸೂರು

ಅಕ್ಕ ಸಾಮಾಜಿಕ ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ರಕ್ತವರ್ಧಿಗೆ – ಧಾತುಪುಷ್ಟಿಗೆ ಸಂಜೀವನ

ಶಕ್ತಿ ಸುಧಾ

ಬೆಲೆ ಡಬ್ಬಿಗೆ ಒಂದು ರೂಪಾಯಿ. ವಿಳಾಸ — ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು